೧೦–೩೦ ಎ.ಎಂ.

ನಾನು ಕೇವಲ ಕೋಲಾರ ಜಿಲ್ಲೆಯವರನ್ನು ಮಾತ್ರವಲ್ಲ, ಅನಾವೃಷ್ಟಿಯಿಂದ ಯಾವ ಯಾವ ಜಿಲ್ಲೆಗಳಲ್ಲಿ ತೊಂದರೆಯಾಗಿದೆ, ಆ ಜಿಲ್ಲೆಯ ಶಾಸಕರನ್ನು ಸಹ ಕರೆಸಿ ಮಾತನಾಡುತ್ತೇನೆ.

ಶ್ರೀ ಬಿ. ಎ ಮೊಹಿದ್ದೀನ್.—ಅತಿವೃಷ್ಟಿಯ ಬಗ್ಗೆ ತಾವು ಇನ್ನೂ ಸ್ಟೇಟ್‌ಮೆಂಟ್ ಮಾಡಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಅತಿವೃಷ್ಟಿ ಜಿಲ್ಲೆಯವರು ಮತ್ತು ಅನಾವೃಷ್ಟಿಯ ಜಿಲ್ಲೆಯವರು ಪಕ್ಕಪಕ್ಕದಲ್ಲಿಯೇ ಕುಳಿತಿದ್ದಾರೆ. ಇವೆರಡನ್ನೂ ಆಜೆಸ್ಟ್ ಮಾಡಿದರೆ ಸಮವೃಷ್ಟಿಯಾಗುತ್ತದೆ. ನಾನು ಅತಿವೃಷ್ಟಿಯಿಂದ ಆದ ಅನಾಹುತಗಳ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದೆ. ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ಮಾಡುತ್ತೇನೆ.

Admissions to Polytechnic Institutions

ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ ಕ್ಷೇತ್ರದಲ್ಲಿ ಪಾಲಿಟೆಕ್ನಿಕ್ ಇದೆ. ಅಲ್ಲಿರುವ ೧೨೦ ಸೀಟ್ ಗಳ ಪೈಕಿ ಹತ್ತು ಸೀಟ್‌ಗಳೂ ಸಹ ನಮ್ಮ ಜಿಲ್ಲೆಯವರಿಗೆ ಸಿಗುತ್ತಿಲ್ಲ. ಎಲ್ಲ ಸೀಟ್‌ಗಳು ಬೆಳಗಾಂ, ಗುಲ್ಬರ್ಗ, ರಾಯಚೂರು ಜಿಲ್ಲೆಯವರಿಗೆ ಹೋಗುತ್ತಿದೆ ಇದು ಸರಿಯಲ್ಲ, ನಮ್ಮ ಜಿಲ್ಲೆಯವರಿಗೆ ಮೊದಲ ಆದ್ಯತೆ ಕೊಡಬೇಕು ಮತ್ತು ೭೦–೮೦% ಸೀಟ್‌ಗಳನ್ನು ಮೀಸಲಿಟ್ಟು ಉಳಿದ ೨೦–೩೦ ಸೀಟ್ ಗಳನ್ನು ಬೇರೆ ಜಿಲ್ಲೆಯವರಿಗೆ ಕೊಡಲಿ, ಇಲ್ಲದಿದ್ದರೆ ಅಲ್ಲಿರುವ ಪಾಲಿಟೆಕ್ನಿಕನ್ನು ಬೇರೆ ಕಡೆಗೆ ಬದಲಾವಣೆ ಮಾಡಿ ಆ ಕಟ್ಟಡವನ್ನು ಆಸ್ಪತ್ರೆಗೋ ಇಲ್ಲವೇ ಬೇರೆ ಕೆಲಸಕ್ಕೋ ಉಪಯೋಗಿಸಿಕೊಳ್ಳಲಿ ಎಂದು ಹೇಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಈಗ ಮಾನ್ಯ ಸದಸ್ಯರು ನಮ್ಮ ಜಿಲ್ಲೆ ಹೆಸರು ಹೇಳಿದರು, ನಮ್ಮ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಇದೆ. ಆದರೆ ಅಲ್ಲಿಸದರಿಗೆ ಪೆಚ್ಚಿನ ಸೀಟ್‌ಗಳು ಸಿಗುತ್ತಿಲ್ಲ. ಈ ಕಡೆಯವರಿಗೆ ಸಿಗುತ್ತಿದೆ. ಆದಕಾರಣ ಈ ಭಾಗದವರು ಅಲ್ಲಿಗೆ ಬರುವುದನ್ನು ನಿಲ್ಲಿಸಿದರೆ, ನಮ್ಮ ಕಡೆಯವರು ಈ ಕಡೆಗೆ ಬರುವುದನ್ನು ನಿಲ್ಲಿಸಂತ್ತೇವೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ಸರ್ಕಾರದವರು ಕಾದಿರಿಸಿದ ಸೀಟ್‌ಗಳನ್ನು ಬೇರೆಯವರಿಗೆ ಕೊಡಬೇಡಿ ಎಂದು ಹೇಳುತ್ತಿರುವಂತೆ ಕಾಣುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ನಾನು ಸಹ ಈ ಪಾಲಿಟೆಕ್ನಿಕ್ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ.

ಅಧ್ಯಕ್ಷರು.—ಈಗ ಸಮಯವಿಲ್ಲ, ತಾವು ಕುಳಿತುಕೊಳ್ಳಿ. ಈಗ ಮಾನ್ಯ ಕಂದಾಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಆಶ್ವಾಸನೆ ಬರಲಿಲ್ಲ.

ಅಧ್ಯಕ್ಷರು.—ತಾವು ಮೊದಲೇ ನೋಟೀಸ್ ಕೊಡದೆ, ಇದ್ದಕ್ಕಿದ್ದಂತೆ ಪ್ರಸ್ತಾಪ ಮಾಡಿದರೆ ಹೇಗೆ? ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಈ ರೀತಿಯಲ್ಲಿ ವರ್ತನೆ ಮಾಡಿದರೆ ಹೇಗೆ ! ಮಾನ್ಯ ಸದಸ್ಯರು ಇಲ್ಲಿ ಸರಿಯಾಗಿ ನಡೆದುಕೊಳ್ಳಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ನನಗೆ ಒಂದು ನಿಮಿಷ ಅವಕಾಶ ಕೊಡಿ ಸಾಕು.

ಅಧ್ಯಕ್ಷರು.—ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ. I have already called the Revenue Minister to make a statement. Please resume your seat. Please do not persist.

ಶ್ರೀ ಎಚ್. ಡಿ. ದೇವೇಗೌಡ.—ತಾವೇಕೆ ಕೈಮುಗಿದು ಕೇಳಿಕೊಳ್ಳಬೇಕು ? ಸರ್ಕಾರದ ಚೀಫ್ ವಿಪ್ ಇದ್ದಾರೆ, ಅವರು ತಮ್ಮ ಕಡೆಯ ಸದಸ್ಯರನ್ನು ಕಂಟ್ರೋಲ್ ಮಾಡಬೇಕು. ಮತ್ತು ಪ್ರತಿ ಹಂತದಲ್ಲಿಯೂ ಅವರು ತಮಗೆ ಸಹಕಾರ ಕೊಡಬೇಕು. ನಾವೂ ಸಹ ಕೊಡಬೇಕಾಗುತ್ತದೆ. ಆದಕಾರಣ ತಾವು ಕೈಮುಗಿದು ಕೇಳಿಕೊಳ್ಳುವ ಅಗತ್ಯವೇ ಇಲ್ಲ.

MR. SPEAKER.—I am extremely sorry for the conduct of certain Members. If the Members were to conduct like this, the Chair will live only for 5 years instead of 10 years.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಹೇಳಿದ್ದಕ್ಕೆ ನನ್ನ ಬೆಂಬಲವಿದೆ. ನಾವು ನಿಯಮಾವಳಿಯ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಆದಕಾರಣ ತಾವು ಕೈಮುಗಿದು ಕೇಳಿಕೊಳ್ಳುತ್ತೇನೆ ಎಂದು ಹೇಳುವುದನ್ನು ನಾನೂ ಸಹ ಒಪ್ಪುವುದಿಲ್ಲ ಈ ಸಭೆಯನ್ನು ನಡೆಸಲು ನಾವು ನಿಮಗೆ ಕಾನೂನು ಪ್ರಕಾರ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ನೀತಿನಿಯಮಾವಳಿಗಳ ಪ್ರಕಾರ ಈ ಸಭೆಯ ಕಾರ್ಯಕಲಾಪಗಳು ಸ್ವಚ್ಛವಾಗಿ ನಡೆಯಬೇಕೆಂಬ ದೃಷ್ಟಿಯಿಂದ ನಿಮಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೇವೆ. ಆದಕಾರಣ ತಾವು ಸದಸ್ಯರನ್ನು ಬೇಡಿಕೊಳ್ಳುವ ಪ್ರಸಂಗವೇ ಇಲ್ಲ. ಮತ್ತು ಆ ಒಂದು ಭಾವನೆ ತಮಗೆ ಇರಬೇಕಾಗಿಲ್ಲ. ಜೊತೆಗೆ ಮಾನ್ಯ ಸದಸ್ಯರಿಗೂ ಸಹ ತಮ್ಮನ್ನು ಈ ಒಂದು ಮಟ್ಟಕ್ಕೆ ತರಬೇಕೆಂಬ ಭಾವನೆ ಏನೂ ಇರುವುದಿಲ್ಲ. ಆದರೆ ಕೆಲವು ಮುಖ್ಯ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಆ ರೀತಿ ಎದ್ದು ನಿಲ್ಲುತ್ತಾರೆ. ಅಷ್ಟೇ ಹೊರತು, ತಮಗೆ ಸಹಕಾರ ಕೊಡಬಾರದೆಂಬ ಭಾವನೆ ಯಾರಿಗೂ ಇರುವುದಿಲ್ಲ.

MR. SPEAKER.—What is the control of the Government Whip, on the ruling party members? If the Members were to go on having a dialogue with the Chair the Chair will be helpless

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಮುಖ್ಯಸಚೇತಕರು ಸದಸ್ಯರನ್ನು ಕಂಟ್ರೋಲ್ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ನಮ್ಮ ಉಪ-ಮುಖ್ಯಸಚೇತಕರು ಹೋಗಿ ಹೇಳಿ ಬಂದಿದ್ದಾರೆ.

Statement by Minister

re : Flood relief measures under taken and Planned for the affected persons.

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ಆಗಿರತಕ್ಕಂಥ ಅನಾಹುತದ ಬಗ್ಗೆ ಈ ಸದನದ ಎಲ್ಲಾ ಮಾನ್ಯ ಸದಸ್ಯರೂ ಅವರವರ ಕಳವಳವನ್ನು ವ್ಯಕ್ತಪಡಿಸಿ ಮತ್ತು ಅವರವರ ಅಭಿಪ್ರಾಯವನ್ನು ಹಿಂದೆ ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ ಸರ್ಕಾರದ ಪರವಾಗಿ ನಾನು ಹೇಳಿಕೆಯನ್ನು ಕೊಟ್ಟು ಇನ್ನೂ ಹೆಚ್ಚಿನ ವಿವರಗಳನ್ನು ಈ ಸದನದ ಮುಂದೆ ಇಡುತ್ತೇನೆ ಎಂದು ಹೇಳಿದ್ದೆನು. ಕೆಲವು ಜನ ಮಾನ್ಯಮಂತ್ರಿಗಳನ್ನು ಆಯಾ ಜಿಲ್ಲೆಗಳಿಗೆ ಈಗಾಗಲೇ ಕಳಿಸಿಕೊಡಲಾಗಿದ್ದು, ಶಾಸಕರೂ ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬರುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ. ಶಾಸಕರೂ ಕೂಡ ಆಯಾ ಕ್ಷೇತ್ರಗಳಿಗೆ ಹೋಗಿ ಅತಿವೃಷ್ಟಿಯಿಂದಾದ ಅನಾಹುತವನ್ನು ಕಣ್ಣಾರೆ ಕಂಡು ಬಂದಿದ್ದಾರೆ. ಶ್ರೀಮಾನ್ ಪಾವಷೆಯವರು ಮತ್ತು ಇನ್ನಿತರ ಕೆಲವು ಸದಸ್ಯರು ಈಗಾಗಲೇ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲದೇ ಶಿವಮೊಗ್ಗ, ಕಾರವಾರ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಈಗಾಗಲೇ ಈ ಬಗ್ಗೆ ಪತ್ರಗಳು ಬಂದಿವೆ ಇದರಲ್ಲಿ ಅವರೆಲ್ಲರೂ ಎಷ್ಟು ಎಕರೆಯಷ್ಟು ಬೆಳೆಗೆ ಹಾನಿಯಾಗಿದೆ, ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನು ಈ ಹಿಂದೆಯೇ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಯಾರ್ಯಾರಿಗೆ ಯಾವ್ಯಾವ ರೀತಿ ಅನ್ಯಾಯವಾಗಿದೆ, ಏನು ತೊಂದರೆ ಆಗಿದೆ, ನಷ್ಟ ಎಷ್ಟು ಆಗಿದೆ ಎಂಬ ಬಗ್ಗೆ ಮತ್ತಷ್ಟು ವಿವರಗಳನ್ನು ಕಲೆಕ್ಟ್ ಮಾಡಿ ಮತ್ತೆ ಈ ಮಾನ್ಯ ಸಭೆಗೆ ಒಂದು ವರದಿಯನ್ನು ಕೊಡತಕ್ಕಂಥ ಮಾತನ್ನು ನಾನು ಹೇಳಿದ್ದೆ. ಆ ಬಗ್ಗೆ ಈಗ ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ. ಈ ಹೇಳಿಕೆಯನ್ನು ಕೊಟ್ಟಮೇಲೂ ಇದು ಪೂರ್ಣವಾಗುವುದಿಲ್ಲ. ಮತ್ತೆ ಹೇಳಿಕೆಯನ್ನು ಕೊಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಕೆಲವು ಹಳ್ಳಿಗಳಲ್ಲಿ ಇನ್ನೂ ನೀರು ತುಂಬಿದೆ ಮತ್ತು ಭೂಮಿಯೆಲ್ಲಾ ನೀರಿನಿಂದ ಆವೃತ್ತವಾಗಿದೆ. ನೀರು ಇನ್ನೂ ಕಡಿಮೆಯಾಗಿಲ್ಲ. ನಾನು ೯ನೇ ತಾರೀಖಿನ ದಿವಸ ಕಾರವಾರ ಮತ್ತು ಶಿವಮೊಗ್ಗದ ಕಡೆಗಳಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಮತ್ತೆ ೧೩ನೇ ತಾರೀಖು ವಾಪಸ್ಸು ಬಂದಿದ್ದೇನೆ. ಇನ್ನೂ

† Indicates that remarks or speeches have not been revised by the member concerned.